# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ** | : | **727 (761)** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **12.12.2023** |
| **ಉತ್ತರಿಸುವ ಸಚಿವರು** | : | **ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು** |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | 2016 ರಿಂದ 2023 ನೇ ಸಾಲಿನವರೆಗೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸರ್ಕಾರ ಕೆಐಎಡಿಬಿ ಮುಖಾಂತರ ರೈತರ ಎಷ್ಟು ಜಮೀನನ್ನು ಸರ್ಕಾರ ಭೂಸ್ವಾಧೀನ ಪಡಿಸಿಕೊಂಡಿದೆ. ಹಾಗೂ ಈ ಜಮೀನಿನ ಮಾಲೀಕರಿಗೆ ನೀಡಬೇಕಾದ ಪರಿಹಾರದ ಹಣ ಎಷ್ಟು; ಪರಿಹಾರದ ಹಣವನ್ನು ಸಂಪೂರ್ಣವಾಗಿ ನೀಡಲಾಗಿದೆಯೆ: (ವಿವರ ನೀಡುವುದು) | 2016 ರಿಂದ 2023 ರವರೆಗೆ ಸರ್ಕಾರವು ಕೆಐಎಡಿಬಿ ಮುಖಾಂತರ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 607-23 ಎ-ಗು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 51-29 ಎ-ಗು ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ.<br>• ಕಲಬುರಗಿ ಜಿಲ್ಲೆಯಲ್ಲಿ ಸ್ವಾಧೀನಪಡಿಸಿಕೊಂಡ ವಿಸ್ತೀರ್ಣ 607-23 ಎ-ಗು ಜಮೀನಿಗೆ ನೀಡಬೇಕಾದ ಭೂಪರಿಹಾರ ಮೊತ್ತ ರೂ.123,62,44,436/- ಗಳಿರುತ್ತದೆ. ಇದರಲ್ಲಿ 12-14 ಎ-ಗು ಜಮೀನಿಗೆ ರೂ.1,42,84,686/- ಗಳಿಗೆ ಸಾಮಾನ್ಯ ಐತೀರ್ಪಿನಡಿ ಭೂಪರಿಹಾರವನ್ನು ಭೂಮಾಲೀಕರಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಠೇವಣಿ ಮಾಡಲಾಗಿರುತ್ತದೆ. ಇನ್ನುಳಿದ ವಿಸ್ತೀರ್ಣ 595-09 ಎ-ಗು ಜಮೀನಿಗೆ ಭೂಪರಿಹಾರ ಪಾವತಿ ಕುರಿತು ಮೊದಲನೇ ಕಂತಿನಲ್ಲಿ ರೂ.50.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಆದ್ಯತೆ ಮೇರೆಗೆ ನಿಗಧಿತ ದಾಖಲೆಗಳನ್ನು ಪಡೆದು ಪರಿಹಾರ ಪಾವತಿಸಲು ಕ್ರಮ ಜರುಗಿಸಲಾಗುತ್ತಿದೆ.<br>• ಯಾದಗಿರಿ ಜಿಲ್ಲೆಯಲ್ಲಿ ಸ್ವಾಧೀನಪಡಿಸಿಕೊಂಡ ವಿಸ್ತೀರ್ಣ 51-29 ಎ-ಗು ಜಮೀನಿಗೆ ನೀಡಬೇಕಾದ ಭೂಪರಿಹಾರ ಮೊತ್ತ ರೂ.8,79,32,500/- ಗಳಿರುತ್ತದೆ. ಇದರಲ್ಲಿ ವಿಸ್ತೀರ್ಣ 41-00 ಎಕರೆ ಜಮೀನಿಗೆ ರೂ.6,97,00,000/- ಗಳು ಭೂಪರಿಹಾರ ಧನ ಒಪ್ಪಂದದ ದರದಲ್ಲಿ ನೀಡಲಾಗಿರುತ್ತದೆ. ಇನ್ನುಳಿದ 10-29 ಎ-ಗು ಜಮೀನಿನ ವಿಸ್ತೀರ್ಣಕ್ಕೆ ಸಾಮಾನ್ಯ ಐತೀರ್ಪು ರಚಿಸುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. |

| | | |
|---|---|---|
| ಆ) | ಸರ್ಕಾರ ಭೂಸ್ವಾಧೀನ ಮುಖಾಂತರ ವಶಪಡಿಸಿಕೊಂಡ ಜಮೀನನ್ನು ಯಾವ ಯಾವ ಕೈಗಾರಿಕೆಗಳಿಗೆ ಹಂಚಿಕೆ ಮಾಡಿ ಎಷ್ಟು ಕೈಗಾರಿಕೆಗಳನ್ನು ನಿರ್ಮಾಣ ಮಾಡಿದೆ; ಎಷ್ಟು ಯುವಕ ಯುವತಿಯರಿಗೆ ಉದ್ಯೋಗ ನೀಡಿವೆ? (ಸಂಪೂರ್ಣ ವಿವರ ನೀಡುವುದು) | 2016 ರಿಂದ 2023 ನೇ ಸಾಲಿನವರೆಗೆ ಕಲಬುರಗಿ ಜಿಲ್ಲೆಯಲ್ಲಿ 607.23 ಎ-ಗು ಮತ್ತು ಯಾದಗಿರಿ ಜಿಲ್ಲೆಯಲ್ಲಿ 51.59 ಎ-ಗು ಜಮೀನನ್ನು ಸ್ವಾಧೀನ ಪಡಿಸಿದ ಜಮೀನಿನಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಹಂಚಿಕೆ ಮಾಡಿರುವ ವಿವರವನ್ನು **ಅನುಬಂಧ-1**ರಲ್ಲಿ ಲಗತ್ತಿಸಲಾಗಿದೆ.<br>ಹಾಗೂ ಸದರಿ ಹಂಚಿಕೆ ಮಾಡಿರುವ ಜಮೀನಿನಲ್ಲಿ ಕಟ್ಟಡ ಕಾಮಗಾರಿ ಹಾಗೂ ಯೋಜನೆಗಳು ಅನುಷ್ಠಾನಗೊಳಿಸುವ ಹಂತದಲ್ಲಿರುತ್ತದೆ.<br>ಕೈಗಾರಿಕೆಗಳು ಕಾರ್ಯಾಚರಣೆಗೊಳಿಸಿದ ನಂತರ ಉದ್ಯೋಗಾವಕಾಶಗಳನ್ನು ನೀಡಲಾಗುತ್ತದೆ. |

**ಸಂಖ್ಯೆ: ಸಿಐ 339 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ**
**ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**

# ಅನುಬಂಧ–ಅ

| ಕ್ರಮ ಸಂ | ಕೈಗಾರಿಕಾ ಪ್ರದೇಶ ಹೆಸರು | ವಿಸ್ತೀರ್ಣ (ಎ–ಗು) | ಷರಾ |
|---|---|---|---|
| | **ಕಲಬುರಗಿ ಜಿಲ್ಲೆ** | | |
| 1. | ನಂದೂರ ಕೆಸರಟಗಿ ಕೈಗಾರಿಕಾ ಪ್ರದೇಶ 3ನೇ ಹಂತ ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಲಾಗಿದೆ | 595–09 | ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸದರಿ ಜಮೀನು ಅಭಿವೃದ್ಧಿ ಶಾಖೆಗೆ ಹಸ್ತಾಂತರಿಸಿರುವುದಿಲ್ಲ |
| 2. | ಬಿ.ಪಿ.ಸಿ.ಎಲ್. ಕಂಪನಿಗಾಗಿ ಭೂಸ್ವಾಧೀನ ಪಡಿಸಲಾಗಿದೆ | 11–00 | ರೈಲ್ವೇ ಸೈಡಿಂಗ್ ನಿರ್ಮಾಣ ಮಾಡಲಾಗಿದೆ. |
| 3. | ಕಪನೂರ ಕೈಗಾರಿಕಾ ಪ್ರದೇಶ 3ನೇ ಹಂತ ಸಂಪರ್ಕ ರಸ್ತೆಗಾಗಿ ಭೂಸ್ವಾಧೀನ ಪಡಿಸಲಾಗಿದೆ | 1–14 | ಸಂಪರ್ಕ ರಸ್ತೆ ನಿರ್ಮಾಣ ಮಾಡಲಾಗಿದೆ. |
| | ಒಟ್ಟು | 607–23 | |
| | **ಯಾದಗಿರಿ ಜಿಲ್ಲೆ** | | |
| 4. | ಕಡೇಚೂರ ಕೈಗಾರಿಕಾ ಪ್ರದೇಶ ಸರ್ವೆ ನಂ 429 | 16 ಎಕರೆ 38 ಗುಂಟೆ | 1) ಮೆ:ಮೀನಾಕ್ಷಿ ಅಗ್ರೋ ಕೆಮಿಕಲ್ಸ್ ರವರಿಗೆ ವಿಸ್ತೀರ್ಣ:10–00 ಎಕರೆ ಜಮೀನನ್ನು ದಿನಾಂಕ: 23.09.2021 ರಂದು ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಸದರಿ ನಿವೇಶನದಲ್ಲಿ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>2) ಮೆ: ವೆಮನಾ ಆರ್‌ಗ್ಯಾನಿಕ್ಸ್ & ಫುಡ್ ಲಿ. ರವರಿಗೆ ವಿಸ್ತೀರ್ಣ:3–50 ಎಕರೆ ಜಮೀನನ್ನು ದಿನಾಂಕ: 01.09.2021 ರಂದು ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಸದರಿ ನಿವೇಶನದಲ್ಲಿ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>3) ಮೆ: ಸಂಜೀವಿನಿ ಫಾರ್ಮಾಸಿಟಿಕಲ್ ರವರಿಗೆ ವಿಸ್ತೀರ್ಣ:2–70 ಎಕರೆ ಜಮೀನನ್ನು ಹಂಚಿಕೆ ಮಾಡಲು ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮೋದನೆ ದೊರಕಿದ್ದು, ಪ್ರಸ್ತುತ ಸದರಿ ಕಂಪನಿಗೆ ಹಂಚಿಕೆ ಪತ್ರ ನೀಡುವ ಕುರಿತು ಕ್ರಮವಹಿಸಲಾಗುತ್ತಿದೆ.<br>4) ಬಾಕಿ ವಿಸ್ತೀರ್ಣ:0–18 ಗುಂಟೆ ಜಮೀನು ಹಂಚಿಕೆಗೆ ಲಭ್ಯವಿರುತ್ತದೆ.<br>ಈ ಮೇಲ್ಕಂಡ ಘಟಕಗಳಿಗೆ ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 5. | ಕಡೇಚೂರ ಕೈಗಾರಿಕಾ ಪ್ರದೇಶ ಸರ್ವೆ ನಂ 620 | 16 ಎಕರೆ 25 ಗುಂಟೆ | ಸದರಿ ಸರ್ವೆ ನಂಬರಿನಲ್ಲಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. |
| 6. | ಕಡೇಚೂರ ಕೈಗಾರಿಕಾ ಪ್ರದೇಶ ಸರ್ವೆ ನಂ 677 | 18 ಎಕರೆ 06 ಗುಂಟೆ | ಸದರಿ ಸರ್ವೆ ನಂಬರಿನಲ್ಲಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. |
| 7. | ಒಟ್ಟು | 51 ಎಕರೆ 29 ಗುಂಟೆ | |